**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 13**
**ಚಾ.ಸಾ.ಸಂಖ್ಯೆಃ 33**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಅಯ್ಯನಗೌಡ ಪಾಟೀಲ |
| ತಂದೆಯ ಹೆಸರುಃ | ವೀರನಗೌಡ |
| ವಯಸ್ಸುಃ | **45** ವರ್ಷ |
| ಉದ್ಯೋಗಃ | ಪಿ. ಐ, ಡಿ.ಎಸ್.ಪಿ. ವಲಯ, ವಿಜಯನಗರ |
| ವಾಸಃ | ವಿಜಯನಗರ. |

**ಸಾಕ್ಷಿಯನ್ನು ದಿಃ 25.02.2026 ರಂದು ವಿ.ಸಿ. ಮೂಲಕ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

ನಾನು ದಿನಾಂಕಃ **20.06.2022** ರಿಂದ **03.08.2023** ವರೆಗೆ ನಾನು ಮುಧೋಳ ವೃತ್ತದ ಸಿ ಪಿ ಐ ಅಂತಾ ಕೆಲಸ ಮಾಡಿದ್ದೇನೆ.

**1.** ದಿ: **23.06.2023** ರಂದು ಚಾಸಾ-**32** ರವರಿಂದ ಈ ಪ್ರಕಣದ ಮುಂದಿನ ತನಿಖೆಯನ್ನು ವಹಿಸಿಕೊಂಡೆ. ದಿ: **25.06.2023** ರಂದು **2** ನೇ ಆರೋಪಿತಳ ಪತ್ತೆಗಾಗಿ ಚಾಸಾ-**20** ರವರಿಗೆ ಜ್ಞಾಪನಾ ಪತ್ರವನ್ನು ನಿಡಿ ಹುಡುಕುವಂತೆ ಸೂಚಿಸಿರುತ್ತೇನೆ. ನಂತರ ಚಾಸಾ-**20** ರವರು ಆರೋಪಿತಳು ಪತ್ತೆಯಾಗದ ಬಗ್ಗೆ ವರದಿ ಕೊಟ್ಟಿದ್ದು ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆ. ದಿ: **07.07.2023** ರಂದು ಆರ್.ಎಫ್.ಎಸ್.ಎಲ್. ಬೆಳಗಾವಿ ಇವರಿಂದ ಈಗ ನೋಡುತ್ತಿರುವ ಆರ್.ಎಫ್.ಎಸ್.ಎಲ್. ವರದಿ ಬಂದಿದ್ದು ಅದನ್ನು ಪಡೆದು ಕಡತಕ್ಕೆ ಅವಳಡಿಕೊಂಡೆ. (ಅದನ್ನು ನಿಪಿ-**35** ಅಂತ ಗುರುತಿಸಲಾಯಿತು).

**2.** ದಿ: **10.07.2023** ರಂದು ಚಾಸಾ-**30** ಇವರಿಂದ ಘಟನಾ ಸ್ಥಳದ ಉತಾರೆ ನಿಪಿ-**14** ನ್ನು ಪಡೆದುಕೊಂಡೆ. ಅದೇ ದಿನ ಚಾಸಾ-**29** ಇವರಿಂದ ಘಟನಾ ಸ್ಥಳದ ಸುಟ್ಟ ಬಾಗಿಲನ್ನು ಪರಿಶೀಲನೆ ಮಾಡಿ ಆ ಬಗ್ಗೆ ನಿಪಿ-**13** ರಂತೆ ವರದಿ ಪಡೆದುಕೊಂಡೆ. ದಿ: **11.07.2023** ರಂದು ಚಾಸಾ-**1** ಇವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ, ದಂ.ಪ್ರ.ಸಂಹಿತೆ ಕಲಂ **164** ರಡಿಯಲ್ಲಿಯ ಹೇಳಿಕೆ ದಾಖಲಿಸಿಕೊಳ್ಳಲು ಮನವಿ ಮಾಡಿದೆ. ಅದೇ ದಿನ ನ್ಯಾಯಾಲಯದಿಂದ ಅವರ ಹೇಳಿಕೆ ನಿಪಿ-**20** ನ್ನು ಪಡೆದುಕೊಂಡಿದ್ದೇನೆ.

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 13**
**ಚಾ.ಸಾ.ಸಂಖ್ಯೆಃ 33**

**3.** ಘಟನಾ ಸ್ಥಳದಲ್ಲಿ ವಿದ್ಯುತ್ ಇರುವ ಬಗ್ಗೆ ಮಾಹಿತಿ ಪೂರೈಸುವಂತೆ ಹೆಸ್ಕಾಂ ನವರಿಗೆ ಈಗ ನೋಡುತ್ತಿರುವ ಮನವಿ ಮಾಡಿಕೊಂಡೆ. (ಅದನ್ನು ನಿಪಿ-**36** ಅಂತ ಗುರುತಿಸಲಾಯಿತು). ದಿ: **14.07.2023** ರಂದು ಹೆಸ್ಕಾಂ ಮುಧೋಳ ಇವರಿಂದ ಈಗ ನೋಡುತ್ತಿರುವ ವರದಿ ಪಡೆದಿರುತ್ತೇನೆ. (ಅದನ್ನು ನಿಪಿ-**37** ಅಂತ ಗುರುತಿಸಲಾಯಿತು). ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಇರುವುದರಿಂದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟಿಸವಾಲು: 1 & 2ನೇ ಆರೋಪಿತರ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ:**

**1.** ಮಂಟೂರ ಗ್ರಾಮದಲ್ಲಿನ ಪೆಟ್ರೋಲ್ ಬಂಕ ಸುತ್ತ-ಮುತ್ತ ಸಾಕಷ್ಟು ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ನನ್ನ ಪ್ರಭಾವ ಬೀರಿ ಗಾಯಾಳುಗಳ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿಲ್ಲವೆಂದು ಕಂಡು ಬಂದರೂ ಸಹ ಅವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು: 3 ರಿಂದ 5ನೇ ಆರೋಪಿತರ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**

**1.** ನಾನು ಈ ಪ್ರಕರಣದಲ್ಲಿಯ ದೂರನ್ನು ನೋಡಿದ್ದೇನೆ. ಗಾಯಾಳು ತುರ್ತು ಚಿಕಿತ್ಸೆಯಲ್ಲಿದ್ದರೂ ಸಹ ಅವರ ಕುಟುಂಬದವರ ಕಡೆಯಿಂದ ದೂರು ಪಡೆಯಬಹುದಾಗಿತ್ತು ಎಂದರೆ ಸಾಕ್ಷಿದಾರರು "ಗಾಯಾಳು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇಲ್ಲದೇ ಇದ್ದರೆ ಮಾತ್ರ ಅವರ ಸಂಬಂಧಿಕರ ಕಡೆಯಿಂದ ದೂರು ಪಡೆದುಕೊಳ್ಳುತ್ತೇವೆ" ಅಂತ ಹೇಳುತ್ತಾರೆ. ನಾನು ಈ ಪ್ರಕರಣದಲ್ಲಿ ಠಾಣಾ ಡೈರಿಯಲ್ಲಿ ಹಾಜರುಪಡಿಸಿಲ್ಲ. ಯಾರಾದರೂ ದೂರು ನೀಡಲು ಬಂದಲ್ಲಿ ಅದರ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ನೀಡಬೇಕಾಗುತ್ತದೆ ಎಂಬ ಸೂಚನೆಗೆ ಸಾಕ್ಷಿದಾರರು " ಪ್ರಕರಣ ದಾಖಲಾದ ನಂತರ ನೀಡಬೇಕಾಗುತ್ತದೆ" ಅಂತ ನುಡಿಯುವರು.

**2.** ಪ್ರ.ವ.ವರದಿ ದಾಖಲಾದ **24** ತಾಸುಗಳ ಅವಧಿಯಲ್ಲಿ ಮೇಲಾಧಿಕಾರಿಗಳಿಗೆ ಮಾಹಿತಿ ಹೋಗುತ್ತದೆ. ಗಂಭೀರ ಅಪರಾಧವಾಗಿದ್ದಲ್ಲಿ

ಮೇಲಾಧಿಕಾರಿಗಳು ಕೂಡ ಸ್ಥಳಕ್ಕೆ ಭೇಟಿ ನೀಡುತ್ತಾರೆ ಎಂದರೆ ಸರಿ. ಠಾಣಾಧಿಕಾರಿ ಘಟನಾ ಸ್ಥಳಕ್ಕೆ ಹೋಗುತ್ತಿದ್ದು, ಅನ್ಯ ಕರ್ತವ್ಯ ಇದ್ದಲ್ಲಿ ಮೇಲಾಧಿಕಾರಿಗಳು ಸ್ಥಳಕ್ಕೆ ಹೋಗುವುದಿಲ್ಲ.

**3.** ಈ ಪ್ರಕರಣದಲ್ಲಿಯ ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಇದ್ದವರನ್ನೆ ನಾವು ಪಂಚರನ್ನಾಗಿ ತೆಗೆದುಕೊಳ್ಳುತ್ತೇವೆ. ಮಂಟೂರು ಗ್ರಾಮದಲ್ಲಿ ಜಾತಿ ಆಧಾರಿತ ಕಲಹ ಇತ್ತು ಎಂದರೆ ಸರಿಯಲ್ಲ. ಅದೇ ಕಾರಣದಿಂದಾಗ ನಾವು ಖೊಟ್ಟಿ ದೂರು ಸ್ವೀಕರಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಗಾಯಾಳುವಿಗೆ ಯಾವುದೇ ಗಾಯಗಳು ಆಗಿಲ್ಲದೇ ಇದ್ದರೂ ಕೂಡ ಖೊಟ್ಟಿ ಗಾಯದ ಪ್ರಮಾಣ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಕರಣದ ತನಿಖೆ ನಡೆಸಿಲ್ಲ ಎಂದರೆ ಸರಿಯಲ್ಲ. ಬೇರೆಯವರ ಪ್ರಭಾವದಿಂದಾಗಿ ನಾನು ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ನುಡಿದ ಎಲ್ಲ ಸಂಗತಿ ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**